ಓ.ಎಸ್.151/2022 ಪಿ.ಡಬ್ಲ್ಯೂ-1

*ನಾರಾಯಣರಾವ್ ತಂದೆ ರಾಘವೇಂದ್ರರಾವ್*

ದಿ.11-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು ಶ್ರೀ ಕೆ.ಸಿ.ಎಸ್ ವಕೀಲರಿಂದ:-</u>**

ನಿ.ಪಿ-23 ಮತ್ತು 26 ದಾಖಲೆಗಳು ಸರಿ ಇರುತ್ತವೆ. ಸರ್ವೆ ನಂ.606 ಗ್ರಾಮ್ ಠಾಣಾ ಜಮೀನಿಗೆ ಹೊಂದಿಕೊಂಡಿರುತ್ತದೆ ಎಂದರೆ ಸರಿ. ರಾಘವೇಂದ್ರಸ್ವಾಮಿ ಮಠ ಮತ್ತು ನಾವು ಕಟ್ಟುತ್ತಿರುವ ಶಾಲಾ ಕಟ್ಟಡಕ್ಕೆ ಸುಮಾರು 50 ಅಂತರ ಇರುತ್ತದೆ. ದಾವಾ ಆಸ್ತಿಯಲ್ಲಿ ರಾಘವೆಂದ್ರಸ್ವಾಮಿ ಮಠದ ಕಟ್ಟಡ, ವೆಂಕಟರಮಣ ಮಠದ ಕಟ್ಟಡ, ನಾವು ಕಟ್ಟುತ್ತಿರುವ ಕಟ್ಟಡ ಮತ್ತು ಬಯಲು ಜಾಗೆ ಇರುತ್ತದೆ. ಬಯಲು ಜಾಗ ಎಷ್ಟು ಅಳತೆ ಇದೆ ಎಂದು ಹೇಳಲಾಗುವುದಿಲ್ಲ ಆದರೆ ನಾವು ಒಟ್ಟು ವಿಸ್ತೀರ್ಣ ಇರುತ್ತದೆ ಎಂದು ಹೇಳಿರುತ್ತೇನೆ. ಅನುಬಂಧ-ಅ ತೋರಿಸಿರುವ ಚೆಕ್ಕುಬಂದಿ ಸರಿ ಇರುತ್ತದೆ. ನಿ.ಪಿ-10 ರಲ್ಲಿರುವ ಚೆಕ್ಕುಬಂದಿ ಮತ್ತು ಅನುಮಬಂಧ-ಅ ದಲ್ಲಿರುವ ಚೆಕ್ಕುಬಂದಿ ವ್ಯತ್ಯಾಸ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪರಿಮಳ ಗುರುಕುಲದ ಬಗ್ಗೆ ವ್ಯಾಜ್ಯ ಇರುವುದರಿಂದ ಆ ಚಕ್ಕುಬಂದಿ ಕೊಟ್ಟಿರುತ್ತೇವೆ. ನಿ.ಪಿ-10 ಪರಿಮಳ ಗುರುಕುಲ ಶಾಲೆ ಕಟ್ಟಡಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ಪರಿಮಳ ಗುರುಕುಲ ಶಾಲಾ ಕಟ್ಟಡಕ್ಕೆ ಸಂಬಂಧಿಸಿದಂತೆ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಓ.ಎಸ್. ನಂ.13/2020 ಈಗಾಗಲೇ ನಡೆದಿದೆ ಎಂದರೆ ಸರಿ. ಅದರಲ್ಲಿ ಪ್ರತಿವಾದಿ ರಾಮಪ್ಪರವರು ನಮ್ಮ ವಿರುದ್ಧ ತಾತ್ಕಾಲಿಕ ತಡೆಯಾಜ್ಞೆ ಪಡೆದಿರುತ್ತಾರೆ ಎಂದರೆ ಸರಿ. ಈ ದಾವೆಯನ್ನು ಮೊದಲು ನಾವು ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದೆವು ಎಂದರೆ ಸರಿ. ಅಲ್ಲಿ ನ್ಯಾಯಾಲಯದ ವ್ಯಾಪ್ತಿಯ ಆದಾರದ ಮೇಲೆ ಈ ನ್ಯಾಯಾಲಯಕ್ಕೆ ವಾದ ಪತ್ರ ಹಿಂದಿರುಗಿಸಿರುತ್ತಾರೆ ಎಂದರೆ ಸರಿ. ನಾವು ಕಟ್ಟುತ್ತಿರುವ ಶಾಲಾ ಕಟ್ಟಡದ ಜಾಗ ಪ್ರತಿವಾದಿಯರದು ಸರ್ವೆ ನಂ.606 ಇರುತ್ತದೆ ಎಂದರೆ ಸರಿಯಲ್ಲ. ಮಠಕ್ಕೆ ಸಂಬಂಧಿಸಿದ ದಾಖಲೆಗಳನ್ನು ಗುರುಕುಲ ಶಾಲಾ ಕಟ್ಟಡಕ್ಕೆ ಸಂಬಂಧಿಸಿದವೆ ಎಂದು ತಿರುಚಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಗುರುಕುಲ ಶಾಲಾ ಕಟ್ಟಡ ಕಟ್ಟುತ್ತಿರುವ ಜಾಗ ನಮ್ಮ ಮಠಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಾವು ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಲಿಂಗಸಗೂರು.